**O.S.No.1191/2023- P.W.1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :30.11.2024.**

**ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :**

ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿ ಸಾಕ್ಷಿ ನುಡಿಯುತ್ತಿದ್ದೇನೆ.

ನೊಂದಾಯಿತ ಕ್ರಯದ ಕರಾರು ಪತ್ರ ದಿನಾಂಕ 13.12.2017 ರ ಮೂಲ ದಾಖಲೆಯನ್ನು ನಿಪಿ-1 ಎಂದು, ಸದರಿ ದಾಖಲೆಯ ಮೇಲೆ ನನ್ನ ಸಹಿಯನ್ನು ನಿಪಿ-1(ಎ) ಎಂದು, 1 ರಿಂದ 3 ನೇ ಪ್ರತಿವಾದಿಗಳ ಸಹಿಗಳನ್ನು ನಿಪಿ-1(ಬಿ) ರಿಂದ ನಿಪಿ-1(ಡಿ) ಎಂದು, ಹಾಗೂ ನನ್ನ ಸಮಕ್ಷಮ ಸಹಿ ಮಾಡಿರುವ ಸಾಕ್ಷಿದಾರರಾದ ಅಂಜೇನಪ್ಪ, ಪ್ರಕಾಶ ಮತ್ತು ಮುನಿಕೃಷ್ಣರವರ ಸಹಿಗಳನ್ನು ನಿಪಿ-1(ಇ) ರಿಂದ ನಿಪಿ-1(ಜಿ) ಎಂದು ಗುರುತಿಸಲಾಯಿತು. ಸಾಗುವಳಿ ಚೀಟಿಯನ್ನು ನಿಪಿ-2 ಎಂದು, ಮ್ಯುಟೇಷನ್ ರಿಜಿಸ್ಟರ್‌ನ ದೃಡೀಕೃತ ನಕಲನ್ನು ನಿಪಿ-3 ಎಂದು, ದಾವ ಸ್ವತ್ತಿನ ಪಹಣಿ ಪತ್ರಿಕೆಯನ್ನು ನಿಪಿ-4 ಎಂದು, ಷರಾ ದಿನಾಂಕ 07.07.2018 ನ್ನು ನಿಪಿ-5 ಎಂದು, ಸದರಿ ದಾಖಲೆಯಲ್ಲಿ 1 ರಿಂದ 3 ನೇ ಪ್ರತಿವಾದಿಗಳ ಸಹಿಗಳನ್ನು ನಿಪಿ-5(ಎ) ರಿಂದ ನಿಪಿ-1(ಸಿ) ಎಂದು, ಸಾಕ್ಷಿದಾರರಾದ ಪ್ರಕಾಶ್ ಮತ್ತು ಅಂಜೇನಪ್ಪರವರ ಸಹಿಗಳನ್ನು ನಿಪಿ-5(ಡಿ) ಮತ್ತು (ಇ) ಎಂದು, ಹಾಗೂ ನನ್ನ ಸಹಿಯನ್ನು ನಿಪಿ-5(ಎಫ್) ಎಂದು ಗುರುತಿಸಲಾಯಿತು. ಕಾನೂನು ನೋಟಿಸ್ ದಿನಾಂಕ 21.05.2021 ರ ಕಚೇರಿಯ ಪ್ರತಿ, 3 ಅಂಚೆ ರಶೀದಿಗಳು ಹಾಗೂ ಒಂದು ಅಂಚೆ ಸ್ವೀಕೃತಿಯನ್ನು ಕ್ರಮವಾಗಿ ನಿಪಿ-6 ರಿಂದ 10 ಎಂದು, ಪ್ರತ್ಯುತ್ತರ ನೋಟಿಸ್ ದಿನಾಂಕ 07.06.2021 ನ್ನು ನಿಪಿ-11 ಎಂದು, ರೀ ಜಾಂಡರ್ ನೋಟಿಸ್ ದಿನಾಂಕ 08.07.2021 ರ ಕಚೇರಿ ಪ್ರತಿಯನ್ನು ಮತ್ತು ಅಂಚೆ ಸ್ವೀಕೃತಿ ಕ್ರಮವಾಗಿ ನಿಪಿ-12 ಮತ್ತು 13 ಎಂದು, ಇನ್ನೊಂದು ಕಾನೂನು ನೋಟಿಸ್ ದಿನಾಂಕ 03.03.2023 ರ ಕಚೇರಿಯ ಪ್ರತಿ ಮತ್ತು ಅಂಚೆ ರಶೀದಿಗಳನ್ನು ಕ್ರಮವಾಗಿ ನಿಪಿ-14 ರಿಂದ 17 ಎಂದು, ಪ್ರತಿವಾದಿಗಳ ಪ್ರತ್ಯುತ್ತರ ದಿನಾಂಕ 20.03.2023 ಮತ್ತು ನ್ನು ನಿಪಿ-18 ಎಂದು, ಪ್ರತಿವಾದಿಗಳ ಕಾನೂನು ನೋಟಿಸ್ ದಿನಾಂಕ 21.08.2023 ನ್ನು ನಿಪಿ-19 ಎಂದು, ಅದಕ್ಕೆ ಪ್ರತ್ಯುತ್ತರ ನೋಟಿಸ್ ದಿನಾಂಕ 29.09.2023 ಮತ್ತು ಅಂಚೆ ರಶೀದಿಯನ್ನು ಕ್ರಮವಾಗಿ ನಿಪಿ-20 ಮತ್ತು ನಿಪಿ-21 ಎಂದು ಗುರುತಿಸಲಾಯಿತು

**<u>O.S.No.1191/2023- P.W.1</u>**

**( ವಾದಿ ಪರ ವಕೀಲರು ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ  ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**